Regd No M 1299 SATYAVADI

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 96] ಶುಕ್ರವಾರ 13—2—48 [ಬಿಡಿ ಪ್ರತಿ 3 ಪೈ

ಮಹಾತ್ಮಾ ಗಾಂಧೀಜಿ

ಪಶ್ಚಿಮವಾಹಿನಿ ಏ 12 — ಈ ದಿವಸ ಬೆ ಳಿಗ್ಗೆ 9 ಗಂಟೆಗೆ ಗಾಂಧೀಜೀಯವರ ಭಸ್ಮವನ್ನು ಸಕಲ ಗೌರವದೊಡನೆ ಮೆರವಣಿಗೆಯಲ್ಲಿ ತೆಗೆದುಕೊಂಡುಹೋಗಿ ಪಶ್ಚಿಮವಾಹಿನಿಯಲ್ಲಿ ಕಾವೇರಿ ನದಿಯಲ್ಲಿ 12 ಗಂಟೆ 10 ನಿಮಿಷದಲ್ಲಿ ಕದರಲಾಯಿತು.

ರಂಗಾಚಾರ್ಲು ಪುಂಭವನದಿಂದ ಹೊರಟ ಮೆರವಣಿಗೆ ಮೈಲುದ್ದವಿತ್ತು. ಗಾಂಧೀಜೀ ಭಸ್ಮವನ್ನು ತಾವ್ರದ ಪಾತ್ರೆಯಲ್ಲಿ ಜೀಪ್‌ಕಾರ್ ಬಾಯೋನೆಟ್ ಮೇಲೆ ಇಡಲಾಗಿತ್ತು. ಭಸ್ಮ ವಾಹನದ ಅಕ್ಕಪಕ್ಕಗಳಲ್ಲಿ ಆಬಾಲ ಸ್ತ್ರೀ ಪುರುಷರಾದಿಯಾಗಿ ಸರ್ವಕೋಮಿನ ಅಸಂಖ್ಯಾತ ಮಂದಿ ಧ್ಯಾನ ಮಾಡುತ್ತಾ ಶೋಕದಿಂದ ಮುಂದೆ ಎರಿಯುತ್ತಿದ್ದರು. ಧ್ವಜಗಳು ಅರ್ಧಮಟ್ಟದಲ್ಲಿದ್ದವು. ಉಕ್ಕಡದ ಅನಂತರ ಭಸ್ಮವಾಹನ ಪಶ್ಚಿಮವಾಹಿನಿಗೆ ತೆರಳಿತು.

ಶಾಸ್ತ್ರೋಕ್ತವಾಗಿ ಗಾಂಧೀಜೀ ಭಸ್ಮವನ್ನು ಕಾವೇರಿಯಲ್ಲಿ ಸೇರಿಸಿದಾಗ ಅಲ್ಲಿ ನೆರೆದಿದ್ದ ಸಾವಿರಾರು ಕಣ್ಣುಗಳಲ್ಲಿ ನೀರು ಸುರಿಯಿತು. ಜನ ಸ್ತಬ್ಧರಾದರು

ಅಲಹಾಬಾದ್ ಫೆ 12 — ಮಹಾತ್ಮ ಗಾಂಧೀಜೀಯವರ ಅಸ್ಥಿ ಸಂಚಯನ ತ್ರಿವೇಣಿ ಸಂಗಮದಲ್ಲಿ ಈ ದಿವಸ 2 ಗಂಟೆಗೆ ಜರುಗಿದಾಗ ನೆರೆದಿದ್ದ ಮಹಾಜನರ ನೇತ್ರಗಳಿಂದ ಪಳಪಳನೆ ನೀರು ಸುರಿಯಿತು.

ಗಾಂಧೀಜೀ ಅಸ್ಥಿ ಸಮೇತ ವಿಶೇಷ ಹೊಗ ಬಂಡಿ 9 ಗಂಟೆಗೆ ಸರಿಯಾಗಿ ಇಲ್ಲಿಗೆ ಬಂದು ತಲುಪಿತು. ಅಸ್ಥಿಯನ್ನು ಪಂ || ನೆಹರು ಮೌ || ಅಬುಲ್ ಕಲಂ ಅಜಾದ್ ಮತ್ತು ಸರ್ದಾರ್ ವಲ್ಲಭಬಾಯ್ ಪಟೇಲರು ಬಹು ಗೌರವದಿಂದ ತೆಗೆದುಕೊಂಡರು

ಗವರ್ನರ್ ಶ್ರೀಮತಿ ಸರೋಜಿನಿ ನಾಯ್ಡುರವರು ಮೆರವಣಿಗೆಯ ನಾಯಕತ್ವವನ್ನು ವಹಿಸಿದ್ದರು. ಧ್ವಜ ಅರ್ಧ ಮಟ್ಟದಲ್ಲಿತ್ತು. ಕುದುರೆ ಸವಾರಿದಳ, ಪಕ್ಕಗಳಲ್ಲಿ ನಡೆಯುತ್ತಿರಲು ಮೇಲಿನಿಂದ ಅಸ್ಥಿ ಪುಷ್ಪ ಮಾಡುತ್ತಿದ್ದ ವಿಮಾನವೇದಳ

ದೇವದಾಸ್ ಗಾಂಧಿಯವರು ನದಿಯು ಬಳಿ ಅಸ್ಥಿ ಪಾತ್ರೆಯನ್ನು ಸಹೋದರಾಂ ದಾಸ್ ಗಾಂಧಿಯವರಿಗೆ ಇತ್ತರು. ವಿಧಿಪೂರ್ವಕವಾಗಿ ಅಸ್ಥಿಯನ್ನು ನೀರಿನಲ್ಲಿ ಬಿಡಲಾಯಿತು.

ಪಂ || ನೆಹರು ಅಲ್ಲಿ ಭಾಷಣ ಮಾಡುತ್ತಾ ಗಾಂಧೀಜೀ ತತ್ವವನ್ನು ಪಾಲಿಸುವುದರಲ್ಲಿ ನಾವು ಉದ್ಯುಕ್ತರಾಗಬೇಕು ಎಂದು ತಿಳಿಸಿದರು

ಮೈಸೂರು ಫೆ 12 — ಈ ದಿವಸ ಸೇರಿಂವ ಈ ಶೋಕ ಸಭೆ ಮಹಾತ್ಮಾ ಜೀಯವರ ಸ್ಮರಣಾರ್ಥವಾಗಿ ಭಾರತಕ್ಕೇ ಅಲ್ಲ ಇಡೀ ವಿಶ್ವಕ್ಕೇ ಅವರು ಮಹಾವ್ಯಕ್ತಿಗಳಲ್ಲೊಬ್ಬರು ಸಮಸ್ತ ಜನಾಂಗ ಪಿತ ಎಂದು ಅವರನ್ನು ಸ್ಮರಿಸಿದರೂ ಅತಿಶಯವಿಲ್ಲ ಎಂದು ಮೈಸೂರು ಸಂಸ್ಥಾನದ ಶ್ರೀವೈಷ್ಣವ ಮಹಾರಾಣಿಯವರು ಈ ದಿವಸ ಸಂಜೆ ಜಗನ್ಮೋಹನ ಅರಮನೆಯಲ್ಲಿ ಮಹಿಳಾ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಅವರು ಮುಂದುವರಿಯುತ್ತಾ — ಕಸ್ತೂರ ಬಾ ಸಿದ್ಧಿ ಹಳ್ಳಿಗಳಲ್ಲಿ ಸ್ತ್ರೀಯರ ಅಭಿವೃದ್ಧಿಗಾಗಿ ವೆಚ್ಚವಾಗಬೇಕೆಂದು ಗಾಂಧೀಜೀ ತಿಳಿಸಿದುದು ಸ್ತ್ರೀಯರ ವಿಷಯದಲ್ಲಿ ಅವರಿಗಿದ್ದ ಆದರ ಅಸಕ್ತಿಯನ್ನು ತೋರಿಸುವುದು ಸ್ತ್ರೀಯರು ಎಂದೆಂದಿಗೂ ಅಹಿಂಸೆಯಲ್ಲಿಯೇ ಅಸಕ್ತರು ಆತ್ಮತತ್ವ ಉಪದೇಶಿಸಿದ ಗಾಂಧೀಜೀ ಪೂಜಾರ್ಹರು ಗಾಂಧೀಜೀ ದುರಂತ ಮೃತ್ಯು ಅಪಾರ ವಿಶ್ವಕ್ಕೆ ನಷ್ಟವುಂಟುಮಾಡಿದೆ ದೇಶದಲ್ಲೀಗ ಅತ್ಯಗತ್ಯ ಕಾರ್ಯಗಳಾಗಬೇಕಾಗಿದೆ ಪ್ರತಿಯೊಂದು ಕಾರ್ಯಕ್ಕೂ ಸ್ತ್ರೀ ಪುರುಷರು ಅವಲಂಬಿಸಲಹೆ ಪಡೆಯಬೇಕಿತ್ತಿದ್ದರು ಗಾಂಧೀಜೀ ತತ್ವಾನುಷ್ಠಾನ ಮಾಡಬೇಕು ಅಹಿಂಸೆ ಮತ್ತು ಪರಸಹಿಷ್ಣುತೆಯಲ್ಲಿ ಆಸಕ್ತಿ ಇಟ್ಟು ಪ್ರಪಡೆಯುವುದೇ ಗಾಂಧೀಜೀಗೆ ನಿಜವಾದ ಸ್ಮಾರಕ

ಮಾಡಿದರು

ಇಂದಿನ ವರ್ತಮಾನ

ಇಂಡಿಯಾಕ್ಕೆ ಗಾಂಧಿಸ್ಥಾನ್ ಎಂದು ಹೆಸರಿಡಬೇಕೆಂದು ದ್ರಾವಿಡಸ್ಥಾನ ಪ್ರತಿಪಾದಕ ಶ್ರೀ ರಾಮಸ್ವಾಮಿ ನಾಯಕರ ಸಲಹೆ

ಂ ಂ

ನವದೆಹಲಿ ಫೆ 10—ಭಾರತಕ್ಕೆ 1918ರಲ್ಲಿ 6055 ಲಕ್ಷ ಟನ್ ಅಸ್ಟ್ರೇಲಿಯಾ ಗೋಧಿ ದೊರೆಯುವುದು.

ಂ ಂ

ಕರಾಚಿ ಫೆ 10—ಪಾಕಿಸ್ಥಾನದಲ್ಲಿ ಗಾಂಧೀಜಿ ಸ್ಮರಣಾರ್ಥವಾಗಿ, ತಾ|| 12ರಲ್ಲಿ ಯಾವ ಪತ್ರಿಕೆಯೂ ಹೊರಡುವುದಿಲ್ಲ.

ಂ ಂ

ಮದರಾಸು— ಕೋರ್ಟಿನಲ್ಲಿ ಜಡ್ಜರ ಸ್ಥಾನದ ಹಿಂದುಗಡೆ ಸತ್ಯ ಮತ್ತು ಧರ್ಮದ ದೂತ ಗಾಂಧೀಜೀ ಪಠವನ್ನು ತಗಲುಹಾಕಬೇಕೆಂದು ಸರಕಾರದ ಆಜ್ಞೆಯಾಗಿದೆ

ಂ ಂ

ಮದರಾಸು— ಮದರಾಸಿಗೆ ಗಾಂಧೀ ಪಟ್ಟಣ ಎಂದು ಹೆಸರಿಡಿರೆಂದು ಸಿಟಿ ಕಾನ್ಸಿಲ್ಲಿನ ಸ್ಥಾಯಿ ಸಮಿತಿ ಸಲಹೆ.

ಂ ಂ

ಮೈಸೂರು— ನಿನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಸೇರಿದ್ದ ಬಹು ಭಾರಿ ಸಭೆಯಲ್ಲಿ ಅನೇಕ ಪ್ರಮುಖರು ಗಾಂಧೀಜೀ ಗುಣಗಾನ ಮಾಡಿ, ಸಂತಾಪ ಸೂಚಿಸಲಾಯಿತು.

ಂ ಂ

ಭಾರತ ಗೌರ್ನರ್ ಜನರಲ್ ಲಾರ್ಡ್ ಮೌಂಟ್‌ಬ್ಯಾಟನ್ನರು ನಿನ್ನೆ ರಾತ್ರಿ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ಹುತಾತ್ಮ ಗಾಂಧೀಜಿಯವರಿಗೆ ಗೌರವ ಸಲ್ಲಿಸಿದರು.

ಂ ಂ

ನವದೆಹಲಿ ಫೆ 9 — ಜಯಪಲಾತ್ಮರ ಸಂಸ್ಥಾನದ ಮೇಲೆ ಪಠಾಣರ ಧಾಳಿ ಬಗ್ಗೆ ಭಾರತ ಸರಕಾರದ ಪ್ರತಿಭಟನೆಗೆ

ವಿದೇಶಗಳಲ್ಲಿ ಭಾರತ ರಾಯಭಾರಿಗಳ ಗಾಗುವ ಖರ್ಚು

ಆಸಫಾಲಿಯವರಿಗೆ

ತಿಂಗಳಿಗೆ 3500ರೂ ಅಲೋಯ್ಯೆನ್ಸು 4500ರೂ. ಮನೆ, ಕಾರು. ಡ್ರೈವರುಗಳ ಖರ್ಚೂ ಕೂಡ ಸರ್ಕಾರದ್ದೇ.

ಪಂ|| ವಿಜಯಲಕ್ಷ್ಮಿ ಪಂಡಿತ್ ಆಸಫಾಲಿಯವರಂಯೇ.

ಕೆ. ಪಿ. ಯನ್. ಮೆನನ್ [ಚೈನಾ]

ತಿಂಗಳಿಗೆ 4500ರೂ. ಮನೆ, ವೆಟಾರು, ಡ್ರೈವರು, ನೌಕರುಗಳ ಖರ್ಚುಗಳು ಸರ್ಕಾರದ್ದೇ. ಈತನ ಪಕ್ಷದಲ್ಲಿ ಷಾಂಘೈನಲ್ಲಿ ಒಂದು ಆಫೀಸ್ಸು ಇದೆ ಇದಕ್ಕೆ ವರ್ಷಕ್ಕೆ ಖರ್ಚು ಅರವತ್ತೆರಡುಸಾವಿರ ರೂಪಾಯಿ.

ಶ್ರೀರಾಮಾರಾವ್ [ಜಪಾನ್]

ಸಂಬಳ ತಿಂಗಳಿಗೆ 3500ರೂ ಅಲೋಯ್ಯೆನ್ಸು 2000ರೂ. ರೇಷನ್ನು ಕಾರು, ಡ್ರೈವರು, ಮನೆ ಎಲ್ಲಾ ಸರಕಾರದವಂದೇ.

ವಿ. ಕೆ. ಕೃಷ್ಣಮೆನನ್ [ಲಂಡನ್]

ಸಂಬಳ ಜರ್ಸಿಕ್ಕೆ ಸುಮಾರು 4500. ಅಲೋಯ್ಯೆನ್ಸು 1500, ಕಾರು ಡ್ರೈವರು, ಫರ್ನಿಚರಿನೊಂದಿಗಿರುವ ಮನೆಯ ಖರ್ಚುಗಳನ್ನು ಸರ್ಕಾರವೇ ವಹಿಸುತ್ತದೆ.

ಅಲೀಜಹೀರ್ [ಇರಾನ್]

ಸಂಬಳ 3000ರೂ, ಅಲೋಯ್ಯೆನ್ಸು 2000, ಕಾರು, ಮನೆ ಖರ್ಚುಗಳೂ ಸರ್ಕಾರದ್ದೇ.

ವಿ. ವಿ. ಗಿರಿ. (ಸಿಲೋನ್)

ಸಂಬಳ 2500ರೂ. ಅಲೋಯ್ಯೆನ್ಸು 1000ರೂ, ಮತ್ತು ಕಾರು.

ನೇಪಾಳಿನ ರಾಯಭಾರಿಗೆ 5200 ರೂ. ಹೀಗೆಯೇ ಒಟೇವಿಯಾ, ಇಂಡೋಚೈನಾ, ಆಸ್ಟ್ರೇಲಿಯಾ, ಕೆನಡಾ ಬರ್ಮಾ ಮೊದಲಾದ ದೇಶಗಳಲ್ಲಿಯ ರಾಯಭಾರಿಗಳಿಗಾಗಿ ವ್ಯಯವಾಗುತ್ತದೆ.

ಸ್ವಿಟ್ಜರ್ಲೆಂಡು, ಫ್ರಾನ್ಸು, ಈಜಿಪ್ಟು ಅಫಘಾನಸ್ಥಾನ, ತುರ್ಕಿ ಹಂಗೆರಿಯಾ, ಜಕೋಸ್ಲೊವೇಕಿಯಾಗಳಲ್ಲಿ ರಾಯಭಾರಿ

ಭಾರತ

ಸುದ್ದಿಗಳು

ಪಿಯಾಲಿ— ಇಲ್ಲಿಯ ಒಬ್ಬ ಸ್ತ್ರೀ ಒಟ್ಟಿಗೆ 5 ಮಕ್ಕಳನ್ನು ಹೆತ್ತಿದಾಳೆ.

ಜಬ್ಬಲ್ಪುರ— ಕುಂಭಾ ಮೇಳಾ ಪ್ರಯಾಣೀಕರು ರೈಲಿನಲ್ಲಿ ಅತ್ಯಧಿಕ ವಾಗಿದ್ದು ಒಬ್ಬನು ಉಸರುಸಿಕ್ಕಿ ಸತ್ತುಹೋದನು.

ಬೆಂಗಳೂರು— ಹರಿಜನ ದೇವಾಲಯ ಪ್ರವೇಶ ಶಾಸನಕ್ಕೆ ಶ್ರೀಮನ್ಮಹಾರಾಜರವರ ಅಂಗೀಕಾರ ದೊರೆತಿದೆ.

ಮೈಸೂರು— ವಿದ್ಯಾರ್ಥಿ ಕಾಂಗ್ರೆಸ್ಸಿನ ಅಶ್ರಯದಲ್ಲಿ ಪ್ರೊ॥ ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಮಹಾರಾಜಾ ಕಾಲೇಜು ಒಳಾಂಗಣದಲ್ಲಿ ಪೂಜ್ಯ ಮಹಾತ್ಮಾ ಗಾಂಧೀಜಿಯವರ ಗೌರವಸ್ಮಾರಕಾರ್ಥವಾಗಿ ಉಪನ್ಯಾಸ ಮಾಲೆ ಈ ದಿನ ಸಂಜೆ ನಡೆಯಲು ಏರ್ಪಡಿಸಲಾಗಿದೆ.

ಫ್ರಾಂಕ್‌ಫರ್ಟ್— ಜೆಹೊವಿಟ್ಸಿನ 65 ವಯಸ್ಸಿನ ಜರ್ಮನ್ ಒನ್ಸಾರ್ಡ್ ಓಹಂಸನು ತನ್ನ ಸಹೋದರಿಯನ್ನು ಕೊಂದು ಬೇಯಿಸಿ ತಿಂದೆನೆಂದು ಒಪ್ಪಿದಾನೆ.

ಕರಾಚಿ— ಸಿಂಧಿನಿಂದ 7 ಲಕ್ಷ ಮಂದಿ ಹಿಂದೂಗಳು ಹೊರಟು ಬಂದಿದ್ದಾರೆ.

ಲಂಡನ್— ಅಫ್ಘಾನಿಸ್ತಾನದ ಮಾಜಿ ಅರಸು ಕ್ಯೆಬರ್ ಮತ್ತು ಹಿಂದೂಕುಷ್ ಕಣಿವೆ ಮಾರ್ಗವಾಗಿ ಅಂಗ್ಲೋ ಅವೇರಿಕನ್ನರ ಬೆಂಬಲದಿಂದ ಅಫ್ಘಾನಿಸ್ತಾನಕ್ಕೆ ಬಂದಿರುವನಂತೆ

ಪ್ಯಾರಿಸ್— ಮಧ್ಯ ಫ್ರಾನ್ಸಿನ ಬುರ್ಗೇಸಿನಲ್ಲಿ ಕಲ್ಲುಕುಟಿಕ ಒಬ್ಬನಿಗೆ ಪೆರೂಪನಲ್ಲಿನ ಅತನ ಚಿಕ್ಕಪ್ಪನ 5 ಮಿಲಿಯ ಪೌಂಡು ಆಸ್ತಿ ದೊರೆತಿರುವುದೆಂದು ಕಾಗದ ಬಂದಿತು. ಅವನ ಮನಸ್ಸಿನಲ್ಲಿ ಇದೇನೂ ಆಶ್ಚರ್ಯವನ್ನುಂಟು ಮಾಡಲಿಲ್ಲ. ಕಾಗದ ಓದಿದ ನಂತರ ಯಥಾಪ್ರಕಾರ ಕಲ್ಲು ಕುಟ್ಟಲು ಹೊರಟ ಈ ಮಹಾರಾಯ.

Save the Cow

Edited, Printed and Published
M S Krishna Rao at the
Chamaraja

ಅ ಮೋ ಘ ಪ್ರಾ ರಂ ಭ

ಅತ್ಯಾಧುನಿಕ ಯಂತ್ರೋಪಕರಣಗಳಿಂದಲೂ ಸುಖಾಸನಗಳಿಂದಲೂ ಸಜ್ಜುಗೊಳಿಸಿರುವ

ರಾಜಧಾನಿಯ ಆಧುನಿಕ ಚಲನ ಚಿತ್ರ ಮಂದಿರ

ಪ್ರಭಾ ಪಿಕ್ಚರ್ ಹೌಸ್

15—2—48 ರಿಂದ .... ದಿನವಹಿ 3 ಆಟಗಳು

ಭರಣಿಯವರ ರತ್ನಮಾಲ (ತೆಲಗು)

ತಾರಾಗಣ : * ಭಾನುಮತಿ * ಸಿ. ಎಸ್. ಆರ್ * ಹೇಮಲತಾ * ಡಾ॥ ಸುಬ್ಬರಾವ್

ಮೈಸೂರು ಸಂಸ್ಥಾನದ ಕೈಗಾರಿಕಾ ಮತ್ತು ಆರ್ಥಿಕ ಸಚಿವರಾದ ಶ್ರೀಮಾನ್ ಹೆಚ್. ಸಿ. ದಾಸಪ್ಪ ಅವರು ಪ್ರಾರಂಭೋತ್ಸವ ನೆರವೇರಿಸಲು ದಯವಿಟ್ಟು ಒಪ್ಪಿರುತ್ತಾರೆ

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಐ. ಡಿ. ಎಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು ಭರ್ತಿಇಳಿಸಿದ ರಾಗಿ ಮತ್ತು ಜೀನುತುಪ್ಪ ಇವುಗಳನ್ನೊಳಗೊಂಡ್ ತಯಾರಿಸಲ್ಪಟ್ಟ ಬಾಸಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಜಾಯಿಲೆ ಒಂದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.
Malleswaram P. O. Bangalore

11—2—48 ರಿಂದ — — 3 ನೇ ವಾರ

ಮೈಸೂರು ನ್ಯೂ ಅಪೇರಾ ಟಾಕೀಸಿನಲ್ಲಿ

ಜೂಪಿಟರ್ ರವರ —

ಕನ್ನಗಿ KANNAGI

(ತಮಿಳು)

ಪಾತ್ರ— ಚಿನ್ನಪ್ಪ, ಕನ್ನಾಂಬ, ಕೃಷ್ಣ, ಮಧುರಂ

— Distributors —
Sri Vijay Gandhinagar B

ಟೆಂಡರು ನೋಟೀಸು

ಮೈಸೂರು ಅರಮನೆಗೆ 1948–49 ನೇ ಸಾಲಿಗೆ ಸಪ್ಲೈ ಆಗಬೇಕಾದ ದಿನಸಿ ಮತ್ತಿತರ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿರುವವರಿಂದ 19–2–1948 ನೇ ಗುರುವಾರ ಮಧ್ಯಾಹ್ನ 3 ಗಂಟೆವರೆಗೆ ತೆಗೆದುಕೊಳ್ಳಲ್ಪಡುತ್ತದೆ

ನೋಟೀಸಿನ ಮುನೀಬರಿಂದ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು

ಎಚ್. ನಿರಂಜರಾಜೆ ಅರಸ್
ಹುಜೂರು ಸೆಕ್ರೆಟರಿಯವರ

Woodlands

From 13–2–48

Federal Operator 99

A must-be-seen Picture
holds you spell bound
from start to finish
Daily 3 Shows
.....

Morning Show
For 4 Days Fr
Jungle